## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 185 ಪಿಎಂಸಿ 2005

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 23-05-2005.

### ಸುತ್ತೋಲೆ

ವಿಷಯ : ರಾಜ್ಯದಲ್ಲಿ ಅನಧಿಕೃತ ಶಾಲಾ ಕಾಲೇಜುಗಳನ್ನು ಪ್ರಾರಂಭಿಸುತ್ತಿರುವ ಬಗ್ಗೆ.

***

1. ವಿದ್ಯಾರ್ಥಿಗಳ ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯಗಳ ಸಮರಸ ಬೆಳವಣಿಗೆಗೆ ಪೋಷಣೆ ನೀಡುವ ಮತ್ತು ಶಿಕ್ಷಣದ ಮೂಲಕ ವೈಜ್ಞಾನಿಕ ದೃಷ್ಟಿಕೋನವನ್ನು ಹಾಗೂ ಸರ್ವಧರ್ಮ ಸಮಭಾವವನ್ನು ಬೆಳೆಸುವ ಉದ್ದೇಶದಿಂದ ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಆರೋಗ್ಯಕರ ಶಿಕ್ಷಣ ಪದ್ಧತಿಗಳ ಅಳವಡಿಕೆ, ಶೈಕ್ಷಣಿಕ ಗುಣಮಟ್ಟದ ನಿರ್ವಹಣೆ ಮತ್ತು ಸುಧಾರಣೆ- ಇವುಗಳ ಬಗ್ಗೆ ಮತ್ತು ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಸಂಘಟಿಸುವ, ಅಭಿವೃದ್ಧಿ ಪಡಿಸುವ ಮತ್ತು ಶಿಸ್ತಿಗೆ ಹಾಗೂ ನಿಯಂತ್ರಣಕ್ಕೆ ಒಳಪಡಿಸುವ ಸಲುವಾಗಿ ಉಪಬಂಧಗಳನ್ನು ಕಲ್ಪಿಸುವುದು ಸದರಿ ಅಧಿನಿಯಮದ ಉದ್ದೇಶವಾಗಿದೆ.

2. ಸದರಿ ಅಧಿನಿಯಮದ ಸೆಕ್ಷನ್ 6 ರನ್ವಯ ವಿಧಿಸಿರುವಂತೆ ಶಿಕ್ಷಣ ಸಂಸ್ಥೆಗಳು ಆ ಅಧಿನಿಯಮಕ್ಕನುಗುಣವಾಗಿರತಕ್ಕದ್ದು. ಅದನ್ನು ಈ ಕೆಳಗೆ ಉದ್ಧರಿಸಿದೆ.

> "6. ಯಾವುದೇ ಶಿಕ್ಷಣ ಸಂಸ್ಥೆಯನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಬೇರೆ ರೀತಿಯಲ್ಲಿ ಸ್ಥಾಪಿತತಕ್ಕದ್ದಲ್ಲ ಇಲ್ಲವೇ ನಿರ್ವಹಿಸತಕ್ಕುದಲ್ಲ."

—2

SO PRLA

ಮುಂದುವರೆದು, ಸದರಿ ಅಧಿನಿಯಮದ ಸೆಕ್ಷನ್ 30 ರನ್ವಯ ಶಿಕ್ಷಣ ಸಂಸ್ಥೆಗಳ ನೋಂದಣಿ ಕಡ್ಡಾಯವಾಗಿದ್ದು, ಅದರ ಉಪ ಸೆಕ್ಷನ್ (1) ಮತ್ತು (2)ನ್ನು ಈ ಕೆಳಗೆ ಉದ್ಧರಿಸಿದೆ.

"(1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸ್ಥಾಪಿತವಾದ ಅಥವಾ ಆ ತರುವಾಯ ಸ್ಥಾಪಿಸಲು ಉದ್ದೇಶಿಸಿರುವ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ ಸಂಸ್ಥೆಯು ಮತ್ತು ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮತ್ತು ಅದರ ಮೇರೆಗಿನ ನಿಯಮಗಳಿಗನುಸಾರವಾಗಿ ನೋಂದಾಯಿತವಾಗತಕ್ಕದ್ದು.

(2) ಯಾವನೇ ವ್ಯಕ್ತಿಯು ಅಥವಾ ಸ್ಥಳೀಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ನೋಂದಾಯಿತವಾಗತಕ್ಕ ಶಿಕ್ಷಣ ಸಂಸ್ಥೆಯು ಹಾಗೆ ನೋಂದಾಯಿತವಾದ ಹೊರತು ಅದನ್ನು ಸ್ಥಾಪಿಸತಕ್ಕುದ್ದಲ್ಲ ಅಥವಾ ಸಂದರ್ಭಾನುಸಾರ ನಡೆಸತಕ್ಕುದಲ್ಲ ಅಥವಾ ನಿರ್ವಹಿಸತಕ್ಕುದಲ್ಲ."

3. ಸದರಿ ಅಧಿನಿಯಮದ ಪ್ರಕಾರ ನೋಂದಣಿಯಾದ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಅದರ ಸೆಕ್ಷನ್ 30 ರ ಪ್ರಕಾರ ಅಸ್ಪದ ಕಲ್ಪಿಸಿದ್ದು, ಅದರ ಉಪ ಸೆಕ್ಷನ್ (1) ಮತ್ತು (2)ನ್ನು ಈ ಕೆಳಗೆ ಉದ್ಧರಿಸಿದೆ:-

"(1) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳಿಗನುಸಾರವಾಗಿ ನೋಂದಣಿಯಾದ ಯಾವುದೇ ಶಿಕ್ಷಣ ಸಂಸ್ಥೆಗೆ ಈ ಅಧಿನಿಯಮದ ಮೇರೆಗೆ ಮನ್ನಣೆ ನೀಡಬಹುದು.

(2) ಈ ಕೆಳಕಂಡ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು ಮನ್ನಣೆ ನೀಡಲಾಗುವುದು ಎಂದರೆ:

(ಎ) ನಿಯಮಿಸಲಾದ ಮೊಬಲಗಿನ ಭದ್ರತಾ ಠೇವಣಿಯನ್ನು ನಿರ್ದಿಷ್ಟಪಡಿಸಿದ ಸಮಯದೊಳಗೆ ಸಂದಾಯ ಮಾಡತಕ್ಕದ್ದು.

(ಬಿ) ಸಂಸ್ಥೆಯನ್ನು ಭದ್ರ ತಳಹದಿಯ ಮೇಲೆ ನಡೆಸಲು ಸಾಕಷ್ಟು ನಿಧಿಗಳನ್ನು ವ್ಯವಸ್ಥಾಪಕ ವರ್ಗವು ಹೊಂದಿರತಕ್ಕದ್ದು ಅಥವಾ ಹೊಂದುವ ಭರವಸೆ ಅದಕ್ಕೆ ಇರತಕ್ಕದ್ದು; ಮತ್ತು

(ಸಿ) ಬೋಧಕ ಮತ್ತು ಇತರ ಸಿಬ್ಬಂದಿ ವರ್ಗದ ವಸತಿ, ನೇಮಕಾತಿ ಮತ್ತು ವ್ಯವಸ್ಥಾಪಕ ವರ್ಗವು ಒಪ್ಪಿಕೊಳ್ಳಬೇಕಾದ ಹಾಗೂ ಅನುಸರಿಸಬೇಕಾದ ನೀತಿ

—3

ಸಂಹಿತೆ, ಪೀಠೋಪಕರಣ ಮತ್ತು ಸಲಕರಣೆಗಳು, ಪಠ್ಯಕ್ರಮ, ಪಠ್ಯಪುಸ್ತಕಗಳು ಇವುಗಳ ಬಗ್ಗೆ ನಿಯಮಿಸಬಹುದಾದಂಥ ಇತರ ಸಾಮಾನ್ಯ ಅಥವಾ ವಿಶೇಷ ಷರತ್ತುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳು.''

4. ಈ ರೀತಿ ಕಂಡಿಕೆ 1 ರಲ್ಲಿ ಉಲ್ಲೇಖಿಸಿದ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಸದರಿ ಅಧಿನಿಯಮದಲ್ಲಿ ಹಾಗೂ ಅದರಡಿ ರಚಿಸಲಾದ ವಿವಿಧ ನಿಯಮಗಳಡಿಯಲ್ಲಿ ಸೂಕ್ತ ಉಪಬಂಧಗಳನ್ನು ಕಲ್ಪಿಸಲಾಗಿದೆ. ಅಂತಹ, ಸಂಬಂಧಿಸಿದ ಉಪಬಂಧಗಳನ್ನು ಪಾಲಿಸದೇ, ಅವುಗಳನ್ನು ಉಲ್ಲಂಘಿಸಿ, ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಹಾಗೂ ಪದವಿಪೂರ್ವ ಕಾಲೇಜುಗಳನ್ನು ನಡೆಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ( ಈ ಸುತ್ತೋಲೆಯಲ್ಲಿ, ಅವುಗಳನ್ನು ''ಅನಧಿಕೃತ ಶಾಲಾ ಕಾಲೇಜುಗಳು'' ಎಂದು ಉಲ್ಲೇಖಿಸಲಾಗಿದೆ).

5. ಇಂತಹ ಅನಧಿಕೃತ ಶಾಲಾ ಕಾಲೇಜುಗಳ ಪರಿಣಾಮವಾಗಿ ಮೇಲೆ ಉಲ್ಲೇಖಿಸಿದ ಅಧಿನಿಯಮ ಮತ್ತು ನಿಯಮಗಳ ಉಲ್ಲಂಘನೆಯಾಗುವುದಲ್ಲದೇ ಅವುಗಳಲ್ಲಿ ಓದುತ್ತಿರುವ ಮಕ್ಕಳ ಭವಿಷ್ಯ ಸಹಜವಾಗಿ ಮುಂದೆ ತೊಂದರೆಗೆ ಒಳಗಾಗುವುದೆಂಬುದನ್ನು ಪ್ರತ್ಯೇಕವಾಗಿ ವಿವರಿಸುವ ಅವಶ್ಯಕತೆ ಇರುವುದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಅಹಿತಕರ ಘಟನೆಗಳು ತಲೆ ಎತ್ತದಂತೆ ಸೂಕ್ತ ನಿಗಾವಹಿಸಿ ನಿಯಂತ್ರಿಸುವುದು ಸರ್ಕಾರದ ಅದರಲ್ಲೂ ಮುಖ್ಯವಾಗಿ ಶಿಕ್ಷಣ ಇಲಾಖೆಯ ಗುರುತರ ಜವಾಬ್ದಾರಿಯಾಗಿರುತ್ತದೆ.

6. ಆದ್ದರಿಂದ ಈಗಾಗಲೇ ರಾಜ್ಯದಲ್ಲಿನ ಇಂತಹ ಅನಧಿಕೃತ ಶಾಲಾ ಕಾಲೇಜುಗಳನ್ನು ಗುರ್ತಿಸಿ ಅವುಗಳು ಮೇ 2005 ರ ಅಂತ್ಯದೊಳಗೆ ನಿಯಮಾನುಸಾರ ನಡೆಸಲು,

--4

ಇಲ್ಲದಿದ್ದಲ್ಲಿ ಅಂತಹವುಗಳ ವಿರುದ್ಧ ಕ್ರಮ ಕೈಗೊಂಡು ಅವುಗಳನ್ನು ಸಂಪೂರ್ಣವಾಗಿ ಮುಚ್ಚಿಸುವ ಬಗ್ಗೆ ಕೂಡಲೇ ಕ್ರಮವಹಿಸುವುದು ಅತ್ಯಾವಶ್ಯಕವಾಗಿರುತ್ತದೆ.

7. 1ನೇ ಜೂನ್, 2005ರ ನಂತರ ಇಂತಹ ಅನಧಿಕೃತ ಶಾಲಾ ಕಾಲೇಜುಗಳು ನಡೆದು, ಅದರಿಂದ ಇಂತಹ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಅನಾವಶ್ಯಕವಾಗಿ ತೊಂದರೆ ಉಂಟಾದಲ್ಲಿ ಅದಕ್ಕೆ ಆಯಾಯಾ ಜಿಲ್ಲೆಯ ಸಂಬಂಧಪಟ್ಟ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರರಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ. ಅಂತಹ ಅಹಿತಕರ ಘಟನೆಗೆ ಅವಕಾಶ ನೀಡದೆ ಮೇ 31, 2005ರ ಒಳಗಾಗಿ ರಾಜ್ಯದಲ್ಲಿನ ಇಂತಹ ಅನಧಿಕೃತ ಶಾಲಾ ಕಾಲೇಜುಗಳು ನಿಯಮಾನುಸಾರ ನಡೆಸುವ ದಿಶೆಯಲ್ಲಿ, ಇಲ್ಲದಿದ್ದಲ್ಲಿ ಅಂಥ ಶಾಲಾ ಕಾಲೇಜುಗಳನ್ನು ಸಂಪೂರ್ಣವಾಗಿ ಮುಚ್ಚುವ ಬಗ್ಗೆ ತುರ್ತಾಗಿ ಕ್ರಮ ವಹಿಸುವಂತೆ ಈ ಮೂಲಕ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶಿಸಿದೆ.

8. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

23.5.05

(ಬಿ.ಹೆಚ್.ಪಡಸಲಗಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಗೆ:

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗ
3) ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು : (ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳು ಇದರ ಪ್ರತಿ ರವಾನಿಸುವುದು)

ಪ್ರತಿ :

1) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು ಅವರ ಆಪ್ತಕಾರ್ಯದರ್ಶಿಯವರಿಗೆ